ಸೇಷನ್ ತೀರ್ಮಾನ ಮಾಡತಕ್ಕ ಅಧಿಕಾರ ಲೇಬರ್ ಡಿಪಾರ್ಟ್‌ಮೆಂಟಿಗೆ ಇದ್ದರೆ ಸೂಕ್ತ, ಬೇಗ ಇತ್ಯರ್ಥ ಮಾಡಲಿಕ್ಕೆ ಅವಕಾಶವಾಗುತ್ತದೆ. ರೆವಿನ್ಯೂ ಇನ್ಸ್‌ಪೆಕ್ಟರ್ ಅವರಿಗೆ ಬಹಳ ಜವಾಬ್ದಾರಿ ಇರುವುದರಿಂದ ಎಲ್ಲಾ ಕೆಲಸಕಾರ್ಯಗಳನ್ನು ಅವರಿಗೆ ಒಪ್ಪಿಸಿರುವುದರಿಂದ ಈ ಕಾರ್ಯದ ಕಡೆಗೆ ಗಮನ ಹರಿಸುವುದಕ್ಕೆ ಅಷ್ಟೊಂದು ಸಮಯ ಸಿಕ್ಕಿಲ್ಲ. ಅವರಿಗೆ ಆಪ್ರೋಚ್ ಬೇರೆ ಇರುತ್ತದೆ. ಈ ಆಸ್ಪೆಕ್ಟ್ ಎಲ್ಲಾ ಗಮನದಲ್ಲಿಟ್ಟುಕೊಂಡು ಲೇಬರ್ ಇಲಾಖೆಗೆ ವಹಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ ಇನ್ನು ಸ್ವಲ್ಪ ದಿವಸದಲ್ಲಿಯೇ ನೋಟೀಫಿಕೇಷನ್ ಆಗುತ್ತದೆ.

ಶ್ರೀ ಬಿ.ವಿ. ಕಕಿಲಾಯ.—ಸ್ವಾಮಿ, ಇದರ ಬಗ್ಗೆ ದೂರುಗಳು ಬಂದಿಲ್ಲ ಎಂದು ಹೇಳುತ್ತೀರಿ. ಬಡ್ಜೆಟ್ ಚರ್ಚೆ ನಡೆಸುತ್ತಿರುವಾಗ ಇಲ್ಲಿಯೇ ಒಂದು ತಮಗೆ ಕಳುಹಿಸಿಕೊಟ್ಟಿದ್ದೆ, ಅದು ಇನ್ನೂ ತೀರ್ಮಾನವಾಗಿಲ್ಲ. ಒಮ್ಮೆ ಆರ್ಡರ್ಸ್‌ಗೆ ಪೋಸ್ಟ್ ಮಾಡಿದ್ದನ್ನು ಮತ್ತೆ ತಿರುಗ ತನಿಖೆ ಶುರು ಮಾಡಿ ಮೂರು ನಾಲ್ಕು ತಿಂಗಳ ಕಾಲ ಕೇಸನ್ನು ತಡೆಹಿಡಿದಿದ್ದಾರೆ. ಇನ್ನು ಮಂಗಳೂರಿನಲ್ಲಿ ಆಕ್ಸಿಡೆಂಟ್ ಆಗಿ ಸತ್ತು ಹೋಗಿರುವುದರ ಬಗ್ಗೆ ೬ ವರ್ಷದಿಂದ ತೀರ್ಮಾನವಾಗಿಲ್ಲ ಎಂದು ತಮ್ಮ ಗಮನಕ್ಕೆ ತಂದಿದ್ದೆ. ಈ ಕೇಸುಗಳ ಬಗ್ಗೆ ಅಧಿಕಾರಿಗಳ ಗಮನ ಸಾಲದು. ಬಹಳ ಕಾಲ ತಡವಾಗಿದೆ. ಆದುದರಿಂದ ಇದರ ಬಗ್ಗೆ ಕೂಡಲೇ ತೀರ್ಮಾನ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆರ್.ಎಸ್. ಪಾಟೀಲ್.—ಈಗ ತಾವು ಕೈ ಬಿಟ್ಟು ಹೋದಂತಹ ಕೇಸನ್ನು ತಾವು ಗಮನಕ್ಕೆ ತಂದಿದೀರಿ, ಆದರೆ ಸಂಬಂಧಪಟ್ಟವರು ಗಮನಕ್ಕೆ ತಂದಿಲ್ಲ ಎಂದು ಹೇಳಿದ್ದಾರೆ. ಈಗ ೧೦೬ ಜನ ಕ್ಲೈಮ್ಸ್ ಮಾಡಿದ್ದಾರೆ ಅವರು ಏನೂ ಕಂಪ್ಲೇಂಟ್ ಮಾಡಿಲ್ಲ. ಈಗ ತಾವು ಬಡ್ಜೆಟ್ ಸೆಷನ್‌ನಲ್ಲಿ ಹೇಳಿದ ಕೈ ಬಿಟ್ಟು ಹೋದಂತಹ ಕೇಸ್ ಗಮನಕ್ಕೆ ತಂದಿದ್ದೀರಿ, ಅದನ್ನು ನಾನು ನೋಡಿಸುತ್ತೇನೆ. ಇನ್ನೊಂದು ವಿಷಯದ ಬಗ್ಗೆ ತಾವು ಹೆಸರು ಕಳುಹಿಸಿಕೊಟ್ಟರೆ ಅದನ್ನು ನಾನು ಪರಿಶೀಲಿಸುತ್ತೇನೆ. ಇನ್ನುಮೇಲೆ ಲೇಬರ್ ಇಲಾಖೆಗೆ ಈ ಕ್ಲೈಮ್ಸ್ ಕೇಸ್ ಬಂದಿರುವುದರಿಂದ ಇಲ್ಲಿಯವರೆಗೆ ಅದಂತಹ ವಿಳಂಬ ಇನ್ನು ಮೇಲೆ ಆಗುವುದಿಲ್ಲ ಎಂದು ಹೇಳುತ್ತೇನೆ.

Interruption in power supply in some villages of Chikkodi Taluk, Belgaum District.

675 SRI A. B. BEDAGI (Sadalga).—Will the Minister of State for Information and Youth Services be pleased to state : —

(a) whether it has come to the notice of the Government that loss to the tune of lakhs of rupees has been caused to the people due to non-supply of electricity to the electrical pumpsets and other machineries in industries in the Villages of Akkola, Bedadihal, Bhoja, Shamaneladi, Sadalga, Yeshasamba, Nippani, Chikkodi, Boragaum and other big villages in Chikkodi taluk, Belgaum District?

(b) if so, the action intended to be taken by the Government ?

SRI K. H. SRINIVAS (Minister of State for Information and Youth Services)

(a) Interruptions in power supply are due to loadshedding that is being resorted to throughout the State due to shortage of peaking power. Every feeder is interrupted once in a week.

(b) Apart from augmenting power availability through new schemes coming into operation in 1979 and through additional imports the following works are proposed to be taken up to provide uninterrupted power supply.

(i) Installation of 110 KV. 10 MVA Sub-station at Chikkodi.

(ii) Installation of 5 MVA 33 KV. MUSS at Nippani.

(iii) To augment the Station capacity by addition of 5 MV. transformer at Sadalga MUSS.

ಶ್ರೀ ಎ. ಬಿ. ಬೆಡಗಿ.—ಸ್ವಾಮಿ, ನನ್ನ (ಆ) ಪ್ರಶ್ನೆಗೆ ಉತ್ತರವಾಗಿ

"ವಿದ್ಯುಚ್ಛಕ್ತಿಯ ಸಾಮರ್ಥ್ಯದ ಪರಮಾವಧಿಯಲ್ಲಿ ಕೊರತೆ ಉಂಟಾಗಿದ್ದು ರಾಜ್ಯಾದ್ಯಂತ ವಿದ್ಯುತ್ ಪ್ರಸಾರವನ್ನು ಕಡಿಮೆಗೊಳಿಸುವುದರಿಂದ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ಅಡಚಣೆಯುಂಟಾಗಿದೆ, ಪ್ರತಿಯೊಂದು ಮಾರ್ಗದಲ್ಲೂ ವಾರಕ್ಕೆ ಒಂದು ಬಾರಿ ಅಡಚಣೆಯುಂಟಾಗಿದೆ".

ಎಂದು ಹೇಳಿದ್ದೀರಿ. ಆದರೆ ವಾರದಲ್ಲಿ ೪–೫ ದಿವಸ ವಿದ್ಯುಚ್ಛಕ್ತಿ ಕೊರತೆಯಾಗಿದ್ದು ಎಷ್ಟೋ ಸಂದರ್ಭಗಳಲ್ಲಿ ರಾತ್ರಿ ೯ ಗಂಟೆ, ೧೦ ಗಂಟೆವರೆಗೂ ವಿದ್ಯುಚ್ಛಕ್ತಿ ಸರಬರಾಜಾಗಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅನೇಕ ಕಡೆಗಳಲ್ಲಿ ಅನಿರೀಕ್ಷಿತವಾಗಿ ಕೆಲವು ದಿವಸಗಳು ಮಾತ್ರ ಈರೀತಿ ಅಡಚಣೆಯುಂಟಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈ ವಿಚಾರ ನನ್ನ ಗಮನಕ್ಕೆ ಬಂದಕೂಡಲೇ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ಒಂದು ವಾರದಲ್ಲಿ ಒಂದು ಸಾರಿ ಒಂದು ಗಂಟೆಗಿಂತ ಹೆಚ್ಚಿಗೆ ಅಡಚಣೆಯುಂಟಾಗದಂತೆ ನೋಡಿಕೊಳ್ಳಬೇಕೆಂದು ತಿಳಿಸಿದ್ದೇನೆ. ಆದರೆ ತಾವು ಹೇಳುವಂತೆ ಹೆಚ್ಚಿನ ತೊಂದರೆಯಾಗಿದೆ ಎಂಬ ದೂರು ನನ್ನ ಗಮನಕ್ಕೆ ಬಂದಿಲ್ಲ. ಒಂದು ವೇಳೆ ಅಂಥ ಹೆಚ್ಚಿನ ತೊಂದರೆಯಾಗುತ್ತಿರುವ ಪ್ರಕರಣಗಳೇನಾದರೂ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡುತ್ತೇನೆ.

ಶ್ರೀ ಎ. ಬಿ. ಬೆಡಗಿ.—ಚಿಕ್ಕೋಡಿ, ನಿಪ್ಪಾಣಿ, ಸಾದಲಗ ಈ ಪ್ರದೇಶಗಳಲ್ಲಿ ಆದಷ್ಟೂ ತೊಂದರೆಯಾಗದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಆದಷ್ಟು ಬೇಗ್ಗುವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ತಮಗೆ ಸಂದೇಹ ಬೇಡ.

Sites distributed to siteless people in Shikaripura Taluk, Shimoga District.

762 SRI K. YENKATAPPA (Shikaripura).—Will the Minister of State for Housing be pleased to state :—

(a) the number of sites distributed to the siteless persons in Shikaripura Taluk, Shimoga district ;

(b) whether the possession of the sites have been handed over to such of the persons to whom the said sites have been allotted ;

(c) if so, the names of such villages (details may be furnished) ?

SRI P. F. RODRIGUES (Minister of State for Housing).—

(a) 6652.

(b) Yes.